**ಈ ದಿನ ದಿನಾಂಕಃ 01.04.2024 ರಂದು ಆರ್‌ಡಬ್ಲೂ-1 ಸಾಕ್ಷಿದಾರರನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಂದುವರಿದ ಪಾಟೀ ಸವಾಲು 1 ನೇ ಎದುರುದಾರರ ಪ ರ ವಕೀಲರಿಂದಃ</u>**

19. ಇದೇ ಸ್ವತ್ತಿಗೆ ಸಂಬಂಧಪಟ್ಟಂತೆ ಬೇರೆ ನ್ಯಾಯಲಯದಲ್ಲಿರುವ ದಾವೆಗಳಲ್ಲಿ ಹಾಜರಾಗಲು ನಮ್ಮ ತಂದೆಯವರು ನನಗೆ ಮುಕ್ತಾರನಾಮಾಧಿಕಾರಪತ್ರ ಕೊಟ್ಟಿರುತ್ತಾರೆ. ಆ ದಾವೆಯ ನಂಬರ್ ಓ.ಎಸ್. 369 ಇದ್ದು ವರ್ಷಗೊತ್ತಿರುವುದಿಲ್ಲ. ಸದರಿ ದಾವೆಯನ್ನು ವಿಜಯಕುಮಾರ್ ಎನ್ನುವವರು ನಮ್ಮ ಕುಟುಂಬದ ಎಲ್ಲಾ 5 ಜನ ಸದಸ್ಯರ ವಿರುದ್ಧ ನಾವು ಸಾಲ ತೆಗೆದುಕೊಂಡಿದ್ದರಿಂದ ವಸೂಲಾತಿಗಾಗಿ ಸಲ್ಲಿಸಿರುತ್ತಾರೆ. ಸದರಿ ವಿಜಯಕುಮಾರ್ ಅವರ ತಂದೆಯ ಹೆಸರು ಕೆಂಪಯ್ಯ ಇರುತ್ತದೆ. ಸದರಿ ಕೆಂಪಯ್ಯ ಅವರು ಈ ಅರ್ಜಿಯಲ್ಲಿ 2 ನೇ ಎದುರುದಾರರು ಇರುತ್ತಾರೆಂದರೆ ಇರಬಹುದು. ಆ ದಾವೆಯಲ್ಲಿ ನಾನು ದಿನಾಂಕಃ 03.11.2023 ರಂದು ಸಾಕ್ಷ್ಯ ನುಡಿದಿರುತ್ತೇನೆಂದರೆ ಸರಿ. ಈಗ ನೋಡುತ್ತಿರುವ ದಾಖಲೆಯು ಆ ನನ್ನ ಸಾಕ್ಷ್ಯ ಹೇಳಿಕೆಯಾಗಿರುತ್ತದೆಂದರೆ ಸರಿ. ಅದನ್ನು ಸಾಕ್ಷಿದಾರರು ಒಪ್ಪಿಕೊಂಡಿದ್ದರಿಂದ ಅದನ್ನು 2 ನೇ ಎದುರುದಾರರ ಪರವಾಗಿ ನಿಆರ್- 15 ಎಂದು ಗುರುತಿಸಲಾಯಿತು.

20. ಸದರಿ ನನ್ನ ನಿಆರ್-15 ರ ಸಾಕ್ಷ್ಯದಲ್ಲಿ ಸರ್ವೇ ನಂಬರ್ 155/1 ರಲ್ಲಿ 37.08 ಗುಂಟೆ ಇರುತ್ತದೆಂದು ತಿಳಿಸಿರುತ್ತೇನೆಂದರೆ ಸರಿ. ಸದರಿ ಜಮೀನನ್ನು ವಿಜಯಕುಮಾರ ಅವರಿಗೆ ಅಡಮಾನ ಮಾಡಿ ಸಾಲ ಪಡೆದುಕೊಂಡಿದ್ದೇವು. ಸದರಿ ಅಡಮಾನ ಪತ್ರವನ್ನು

ನೊಂದಣಿಪಡಿಸಲು ಬಾಕಿಯಿದ್ದುದರಿಂದ ಪೆಂಡಿಂಗ್ ಇತ್ತು. ನಾನು ಬಿ.ಬಿ.ಎಂ. ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆಂದರೆ ಕನ್ನಡ ಬರೆಯಲು ಬರುವುದಿಲ್ಲ, ಆದರೆ ಇಂಗ್ಲೀಷ ಓದುತ್ತೇನೆ. ಕನ್ನಡ ಓದುತ್ತೇನೆಂದರೆ ಸ್ಪಷ್ಟವಾಗಿ ಬರುವುದಿಲ್ಲ. ಸರ್ವೇ ನಂಬರ್ 155/1 ಈಗ ಖಾಲಿ ಇರುತ್ತದೆ. ಯಾವುದೇ ಬೆಳೆ ಬೆಳೆದಿರುವುದಿಲ್ಲ. ಸದರಿ ಜಮೀನನ್ನು ವಿಜಯಕುಮಾರ್ ಅವರಿಗೆ ಅಡಮಾನಗೊಳಿಸುವ ಸಮಯದಲ್ಲಿ ನೀಲಗಿರಿ ಮರಗಳು ಇದ್ದವು ಮತ್ತು ಏಳೂವರೆ ಗುಂಟೆಗಳಲ್ಲಿ ತರಕಾರಿಯನ್ನು ಬೆಳೆಯುತ್ತಿದ್ದೇವು.

21. ನಮಗೆ ಸೇರಿದ ಸರ್ವೇ ನಂಬರ್ 155/1 ರ 37.08 ಗುಂಟೆಗಳು ಕೆಂಪಯ್ಯನವರ ಸರ್ವೇ ನಂಬರ್ 155/2 ರ ಪಶ್ಚಿಮಕ್ಕೆ ಮತ್ತು ದಕ್ಷಿಣಕ್ಕೆ ಬರುತ್ತದೆ. ನಮಗೆ ಬೇಕಾಗುವ ತರಕಾರಿಗಳನ್ನು ನಮ್ಮ ಜಮೀನಿನ ಪೂರ್ವ ದಿಕ್ಕಿಗೆ ಹಾಕಿದ್ದೇವು. ಸದರಿ ನೀಲಗಿರಿ ಮರಗಳನ್ನು ನಾವು ಕಟಾವು ಮಾಡಿಸಿರುವುದಿಲ್ಲ. ನಮಗೆ ಸಾಲ ನೀಡಿದ್ದ ವಿಜಯಕುಮಾರ್ ಅವರು ಸದರಿ ನೀಲಗಿರಿ ಮರಗಳನ್ನು ಕಟಾವು ಮಾಡಿಸಿರುತ್ತಾರೆ. 2021 ರಲ್ಲಿ ಅವರು ಕಟಾವು ಮಾಡಿಸಿರುತ್ತಾರೆ. ಸದರಿ ವಿಜಯಕುಮಾರ್ ಅವರು ನಮ್ಮ ಪಕ್ಕದ ಜಮೀನಿನಲ್ಲಿ ಅಂದರೆ ಅವರ ತಂದೆಯ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾರೆ ಮತ್ತು ಹಾಲೋಬ್ರಿಕ್ಸಗಳನ್ನು ತಯಾರಿಸುತ್ತಾರೆ.

22. ನಮ್ಮ ಜಮೀನಿನ ಪಶ್ಚಿಮದ ದಿಕ್ಕಿನಲ್ಲಿರುವ ಅವರ ಜಮೀನಿನಲ್ಲಿ ವ್ಯವಸಾಯ ಮಾಡುತ್ತಾರೆ ಮತ್ತು ದಕ್ಷಿಣದ ದಿಕ್ಕಿನಲ್ಲಿರುವ ಅವರ ಜಮೀನಿನಲ್ಲಿ ಹಾಲೋಬ್ರಿಕ್ಸಗಳನ್ನು

ತಯಾರಿಸುತ್ತಾರೆಂದರೆ ಸರಿ. ದಿನಾಂಕಃ 07.05.2020 ರಂದು ಸ್ವಾಧೀನ ಸಹಿತ ಕ್ರಯದ ಕರಾರು ಪತ್ರವನ್ನು ಬರೆದುಕೊಟ್ಟ ದಿನಾಂಕದಿಂದ ಸದರಿ ವಿಜಯಕುಮಾರ್ ರವರು ನಮ್ಮ ಜಮೀನಿನನ್ನೂ ಸಹ ಸೇರಿಕೊಂಡು ಹಾಲೋಬ್ರಿಕ್ಸ ತಯಾರಿಸುತ್ತಾರೆಂದರೆ ಸರಿಯಲ್ಲ. ಈಗ ಸರ್ವೇ ನಂಬರ 155/1 ರ 37.08 ಗುಂಟೆಗಳ ಸ್ವಾಧೀನವು ಸಧ್ಯದಲ್ಲಿ ಯಾರೂ ಇರುವುದಿಲ್ಲ. ಸದರಿ ಕರಾರುಪತ್ರ ಬರೆದುಕೊಟ್ಟ ನಂತರ ಸದರಿ ಜವೀನಿನ ಸ್ವಾಧೀನವನ್ನೂ ನೀಡಿದ್ದರೂ ಸಹ ಈ ಅರ್ಜಿಗಾಗಿ ಸದರಿ ಜಮೀನಿನ ಸ್ವಾಧೀನವನ್ನು ಈಗ ಯಾರೂ ಹೊದಿರುವುದಿಲ್ಲವೆಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ವಿಜಯಕುಮಾರ್ ಅವರಿಂದ ಪಡೆದುಕೊಂಡ ಸಾಲವನ್ನು ತೀರಿಸಲು 1 ವರ್ಷದ ಸಮಯವನ್ನು ತೆಗೆದುಕೊಂಡಿದ್ದೇವು. ಅದಕ್ಕೆ ಸಂಬಂಧಪಟ್ಟಂತೆ ಅವರು ನಮಗೆ ನೋಟೀಸನ್ನು ನೀಡಿರುತ್ತಾರೆ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ನೀಡಲಾಯಿತು.**

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯುದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

4ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ.